# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1040 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12/03/2026 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನೋಂದಣಿಯಾಗಿರುವ ಕಾರ್ಯನಿರತ ಪತ್ರಕರ್ತರ ಸಂಘಗಳು ಮತ್ತು ಪತ್ರಿಕೆಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು: | ರಾಜ್ಯದಲ್ಲಿ ನೋಂದಣಿಯಾಗಿರುವ ಕಾರ್ಯನಿರತ ಪತ್ರಕರ್ತರ ಸಂಘಗಳ ಮಾಹಿತಿಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಜಿಲ್ಲಾವಾರು ಪತ್ರಿಕೆಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಕಾರ್ಯನಿರತ ಪತ್ರಿಕಾ ವರದಿಗಾರರಿಗೆ ಹಾಗೂ ಅವರ ಕುಟುಂಬದವರಿಗೆ ಇರುವ ಸೌಲಭ್ಯಗಳು ಯಾವುವು : | ರಾಜ್ಯದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಾನ್ಯತೆ ಪಡೆದ ಎಲ್ಲಾ ಪತ್ರಕರ್ತರು ಮತ್ತು ಕುಟುಂಬ ವರ್ಗದವರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ:<br><br>1. ರಾಜ್ಯದ ಕನ್ನಡ ಪತ್ರಿಕೋದ್ಯಮದಲ್ಲಿ ನಿಯಮಾನುಸಾರ ಅರ್ಹರಿರುವ 60 ವರ್ಷ ವಯೋಮಾನ ಮೀರಿದ, ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರಿಗೆ ರೂ.15,000/- ಗಳ ಮಾಸಾಶನವನ್ನು ಹಾಗೂ ಅಂತಹ ಪತ್ರಕರ್ತರು ಮೃತರಾದಲ್ಲಿ ಅವರ ಅವಲಂಬಿತ ಪತ್ನಿ ಅಥವಾ ಪತಿಗೆ ರೂ.7,500/-ಗಳ ಕುಟುಂಬ ಮಾಸಾಶನ ವನ್ನು ನೀಡಲಾಗುತ್ತಿದೆ.<br>2. ಮಾಧ್ಯಮ ಮಾನ್ಯತೆ ಹೊಂದಿರುವ ಪತ್ರಕರ್ತರು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ರೂ.5.00 ಲಕ್ಷಗಳ ಮಿತಿಯೊಳಗೆ ನಗದು ರಹಿತ ಚಿಕಿತ್ಸೆಗಾಗಿ "ಮುಖ್ಯಮಂತ್ರಿಗಳ ಮಾಧ್ಯಮ ಸಂಜೀವಿನಿ' ಯೋಜನೆ ಜಾರಿಗೊಳಿಸಲು ಕ್ರಮ ವಹಿಸಲಾಗಿದೆ.<br>3. ಮಾಧ್ಯಮ ಮಾನ್ಯತಾ ಪತ್ರಗಳನ್ನು ಹೊಂದಿರುವ ಪತ್ರಕರ್ತರು ರಾಜ್ಯಾದ್ಯಂತ ಉಚಿತವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ವಿವಿಧ ನಿಗಮಗಳ ಎಲ್ಲಾ ಶ್ರೇಣಿಗಳ ಬಸ್ಸುಗಳಲ್ಲಿ ಸಂಚರಿಸಲು |

| | | |
|---|---|---|
| | | ಅನುಕೂಲವಾಗುವಂತೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ.<br>4. ಮಾಧ್ಯಮ ಮಾನ್ಯತಾ ಪತ್ರವನ್ನು ಹೊಂದಿಲ್ಲದೇ ಇರುವ ಗ್ರಾಮೀಣ ಪತ್ರಕರ್ತರಿಗೂ ಕೂಡ ಆಯಾ ಸಂಸ್ಥೆಗಳ ಸಂಪಾದಕರ ಶಿಫಾರಸ್ಸಿನ ಮೇರೆಗೆ ಅವರ ಪತ್ರಿಕಾ ಚಟುವಟಿಕೆಗೆ ಅನುಕೂಲವಾಗು ವಂತೆ ಜಿಲ್ಲಾ ಮಟ್ಟದಲ್ಲಿ ಸಂಚರಿಸಲು ಉಚಿತವಾಗಿ ಬಸ್‌ಪಾಸ್‌ಗಳನ್ನು ವಿತರಿಸಲಾಗುತ್ತದೆ. |
| ಇ) | ಕಾರ್ಯನಿರತ ಪತ್ರಕರ್ತರ ಕುಟುಂಬದ ಮಕ್ಕಳಿಗೆ ಉನ್ನತ ವ್ಯಾಸಂಗ ಹಾಗೂ ವಿದೇಶ ವ್ಯಾಸಂಗಕ್ಕೆ ಮತ್ತು ವಿದ್ಯಾಭ್ಯಾಸಕ್ಕೆ ವಿಶೇಷ ಶಿಷ್ಯ ವೇತನ ನೀಡುವ ಪ್ರಸ್ತಾಪ ಸರ್ಕಾರದ ಹಂತದಲ್ಲಿದೆಯೇ: | ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಈ) | ಇಲ್ಲದಿದ್ದಲ್ಲಿ, ಈ ಕುಟುಂಬಗಳಿಗೆ ವಿಶೇಷ ಅನುದಾನ, ವಸತಿ, ವಿದ್ಯಾರ್ಥಿ ವೇತನ ಇತ್ಯಾದಿ ಸೌಕರ್ಯಗಳನ್ನು ನೀಡುವ ಬಗ್ಗೆ ಸರ್ಕಾರದ ನಿಲುವೇನು ? | ಇಂತಹ ಯೋಜನೆಗಳನ್ನು ಹಮ್ಮಿಕೊಳ್ಳುವ ಉದ್ದೇಶ ಸದ್ಯಕ್ಕೆ ಇರುವುದಿಲ್ಲ. |

**ಕಸಿಐ-ಪಿಐಪಿ/56/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

**ಅನುಬಂಧ**

**ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳ ಅಂಕಿ ಅಂಶಗಳು**

| ಕ್ರ. ಸಂ | ಜಿಲ್ಲೆಯಹೆಸರು | ಜಿಲ್ಲಾ ದಿನಪತ್ರಿಕೆಗಳು | ಪ್ರಾದೇಶಿಕ ದಿನಪತ್ರಿಕೆಗಳು | ನಿಯತಕಾಲಿಕೆಗಳು |
|---|---|---|---|---|
| 1 | ಬೆಂಗಳೂರುನಗರ | 22 | 17 | 69 |
| 2 | ಬೆಂಗಳೂರುಗ್ರಾಮಾಂತರ | 2 | 3 | 1 |
| 3 | ಬೀದರ್ | 32 | 7 | - |
| 4 | ಬಳ್ಳಾರಿ | 4 | 2 | - |
| 5 | ಬೆಳಗಾವಿ | 22 | 18 | 3 |
| 6 | ಬಾಗಲಕೋಟೆ | 57 | 24 | 1 |
| 7 | ಚಿಕ್ಕಬಳ್ಳಾಪುರ | 6 | - | - |
| 8 | ಚಾಮರಾಜನಗರ | 5 | 1 | - |
| 9 | ಚಿಕ್ಕಮಗಳೂರು | 11 | 2 | 2 |
| 10 | ಚಿತ್ರದುರ್ಗ | 24 | 6 | 1 |
| 11 | ದಕ್ಷಿಣಕನ್ನಡ ಜಿಲ್ಲೆ (ಮಂಗಳೂರು) | 2 | 3 | 11 |
| 12 | ದಾವಣಗೆರೆ | 30 | 7 | 11 |
| 13 | ಧಾರವಾಡ | 10 | 1 | 18 |
| 14 | ಗದಗ | 8 | 4 | - |
| 15 | ಹಾಸನ | 22 | 2 | 1 |
| 16 | ಹಾವೇರಿ | 4 | 3 | - |
| 17 | ಕೊಪ್ಪಳ | 21 | - | - |
| 18 | ಕಲಬುರಗಿ | 44 | 10 | 2 |
| 19 | ಕೋಲಾರ | 20 | 11 | - |
| 20 | ಮಡಿಕೇರಿ (ಕೊಡಗುಜಿಲ್ಲೆ) | 3 | - | 1 |
| 21 | ಮಂಡ್ಯ | 40 | 13 | 11 |
| 22 | ಮೈಸೂರು | 5 | 9 | 10 |
| 23 | ರಾಮನಗರ | 12 | 1 | 1 |
| 24 | ರಾಯಚೂರು | 24 | 9 | 2 |
| 25 | ಶಿವಮೊಗ್ಗ | 3 | 3 | 3 |
| 26 | ತುಮಕೂರು | 22 | 3 | 6 |
| 27 | ಉತ್ತರಕನ್ನಡ (ಕಾರವಾರ) | 3 | 2 | 1 |
| 28 | ವಿಜಯಪುರ | 38 | 2 | 2 |
| 29 | ಯಾದಗಿರಿ | 17 | 3 | - |
| 30 | ಉಡುಪಿ | - | - | 5 |
| 31 | ವಿಜಯನಗರ | 3 | - | - |
| **ಒಟ್ಟು** | | **548** | **166** | **162** |